ಅಡಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಮುಖ್ಯಮಂತ್ರಿಗಳು ಮೊದಲನೇ ಅಧಿವೇಶನದಲ್ಲಿ ಹೇಳಿದ್ದರು. ನಬಾರ್ಡ್‌ನ ಅಧ್ಯಕ್ಷರಾಗಿರತಕ್ಕಂಥವರು ಕೂಡ ಈ ಕೆಲಸಗಳು ಸಮಂಜಸವಾಗಿ ಆಗುತ್ತಿಲ್ಲ, ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನವ ಮಾತನ್ನು ಹೇಳಿದ್ದಾರೆ. ಆದ್ದರಿಂದ, ಕಳೆದ ಅಧಿವೇಶನದಲ್ಲಿ ಹೇಳಿದ ಮಾತನ್ನು ಇವತ್ತು ನಡೆಸಿಕೊಡುವಿರಾ ಎಂದು ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ನಡೆಸಿಕೊಡುತ್ತೇವೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 12ನೇ ಪಟ್ಟಿಯಲ್ಲಿರುವ 154 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಂಗಳೂರು ಹೊರವಲಯಗಳಿಗೆ ನೀರು ಪೂರೈಕೆ

1351 (1564) ಶ್ರೀ ಅಶೋಕ. ಆರ್ (ಉತ್ತರಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬೆಂಗಳೂರು ಹೊರವಲಯದಲ್ಲಿರುವ ನಗರ ಸಭೆ, ಪುರಸಭೆ ಪ್ರದೇಶಗಳಿಗೆ ಬೆಂಗಳೂರು ಜಲ ಮಂಡಲಿಯಿಂದ ನೀರು ಪೂರೈಕೆ ಮಾಡುವ ಬಗ್ಗೆ ಯೋಜನೆ ರೂಪಿಸಲಾಗಿದೆಯೆ?

2) ಹಾಗಿದ್ದಲ್ಲಿ ಈ ಯೋಜನೆ ಎಂದಿನಿಂದ ಪ್ರಾರಂಭವಾಗುತ್ತದೆ.

3) ಇದಕ್ಕೆ ಎಷ್ಟು ಹಣ ನಿಗದಿ ಮಾಡಲಾಗಿದೆ;

4) ಈ ಯೋಜನೆ ಎಂದು ಪೂರ್ಣಗೊಳ್ಳುತ್ತದೆ;

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

1) ಹೌದು

2) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕನಕಪುರ ರಸ್ತೆ ದುರಸ್ತಿ ಬಗ್ಗೆ ನಾಗರೀಕರಿಂದ ಧರಣಿ

1354 (1568) ಶ್ರೀ ಆರ್.ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದ ಕನಕಪುರ ರಸ್ತೆ ದುರಸ್ತಿ ಬಗ್ಗೆ ನಾಗರೀಕರು ಧರಣಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?